ಇ) ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಕಾರ್ಯದರ್ಶಿಗಳನ್ನು ವರ್ಗಾಯಿಸುವ ಅಧಿಕಾರ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಇದೆ.

ಈ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೫ ರಿಂದ ಈ ತನಕ ಒಟ್ಟು ೨೧ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಲಾಗಿದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬೩ ಪ್ರಾಥಮಿಕ ಸೇವಾ ಸಹಕಾರ ಸಂಘಗಳಿವೆ. ಹಾಗೂ ೧೬೩ ಮಂದಿ ಸಕ್ರೆಟರಿಗಳು ಇದ್ದಾರೆಂದು ತಿಳಿಸಿದ್ದಾರೆ. ಈ ೧೬೩ ಜನರ ಪೈಕಿ ೨೧ ಜನ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಲಾಗಿದೆ ಎಂದು ಸಹ ತಿಳಿಸಿದ್ದಾರೆ. ಈ ಸೇವಾ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ೪೭೭೭ ಕಾರ್ಯದರ್ಶಿಗಳೇನಿದ್ದಾರೆ, ಇವರಿಗೆ ಸರಕಾರದ ನೌಕರರಿಗೆ ಯಾವ ನಿಯಮಾವಳಿಗಳು ಅನ್ವಯವಾಗುತ್ತವೆಯೋ ಅದೇ ನಿಯಮಗಳು ಈ ಕಾರ್ಯದರ್ಶಿಗಳಿಗೂ ಅನ್ವಯವಾಗುತ್ತದೆಯೇ ? ಸರ್ಕಾರಿ ನೌಕರರಿಗೆ ಯಾವ ರೀತಿ ಸೌಲಭ್ಯಗಳು ಸಿಗುತ್ತವೆಯೋ, ಅದೇ ರೀತಿ ಇವರುಗಳಿಗೂ ಸಿಗುತ್ತದೆಯೇ ಎಂದು ತಿಳಿಸಬೇಕು.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬೩ ಜನ ಕಾರ್ಯದರ್ಶಿಗಳು ಇದ್ದಾರೆ ಅವರಲ್ಲಿ ೨೧ ಜನರನ್ನು ಮಾತ್ರ ವರ್ಗಾವಣೆ ಮಾಡಲಾಗಿದೆ. ಬೇರೆಯವರನ್ನು ವರ್ಗಾವಣೆ ಮಾಡಬಾರದೆಂದು ನಾವು ಹೇಳಿಲ್ಲ. ಯಾವ ಕಾರ್ಯದರ್ಶಿಗಳಾದರೂ ಸರಿಯಾಗಿ ಕೆಲಸ ಮಾಡದಿದ್ದರೆ ಹಾಗೂ ಏನಾದರೂ ಅವರುಗಳ ಮೇಲೆ ದೂರುಗಳು ಇದ್ದರೆ ಅವುಗಳನ್ನು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ. ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಆ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಇನ್ನು ಅಲ್ಲಿ ಕೆಲಸ ಮಾಡುವ ೪೭೭೭ ಜನ ನೌಕರರಿಗೆ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳು ಸಿಗುತ್ತಿವೆಯೇ ಎಂದು ಕೇಳಿದರು. ಆ ಬಗ್ಗೆ ನಾನು ಹೇಳುವುದಾದರೆ ಅದು ಆಯಾಯಾ ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ, ಇನ್ನು ಮಾನ್ಯ ಸದಸ್ಯರು ಏನೊಂದು ಪ್ರಶ್ನೆ ಕೇಳಿದ್ದಾರೆ ಆ ಬಗ್ಗೆ ಆಯಾಯಾ ಪ್ರಾಥಮಿಕ ಸೇವಾ ಸಹಕಾರಿ ಸಂಘದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್, ಎನ್. ನಾಯಕ್.—ಮಾನ್ಯ ಸಭಾಪತಿಯವರೇ, ನನಗೆ ಬೇಕಾದ ಉತ್ತರವೇನೆಂದರೆ ಸರ್ಕಾರಿ ನೌಕರರಿಗೆ ಸಿಗತಕ್ಕಂಥ ಯಾವ ಯಾವ ಸೌಲಭ್ಯಗಳು ಅವರಿಗೆ ಸಿಗುತ್ತಿವೆ ? ಯಾವ ಯಾವ ಸೌಲಭ್ಯಗಳು ಅವರಿಗೆ ಸಿಗುತ್ತಿಲ್ಲ. ಮತ್ತು ಯಾವ ಯಾವ ಸೌಲಭ್ಯಗಳು ಸಿಗುತ್ತಿಲ್ಲವೋ ಆ ಬಗ್ಗೆ ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಏಕಾಂತಯ್ಯ.—ಸರ್ಕಾರಿ ನೌಕರರಿಗೆ ಸಿಗತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ನೌಕರರಿಗೆ ಕೊಡಲು ಸಾಧ್ಯವಿಲ್ಲ ಕಾರಣ ಅವುಗಳ ವೆಚ್ಚವನ್ನು ಆಯಾಯಾ ಪ್ರಾಥಮಿಕ ಸೇವಾ ಸಹಕಾರ ಸಂಘಗಳೇ ಭರಿಸಬೇಕಾಗುತ್ತದೆ. ಆದ್ದರಿಂದ ಎಲ್ಲಾ ಸೌಲಭ್ಯಗಳನ್ನು ಕೊಡಲು ಸಾಧ್ಯವಿಲ್ಲ. ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ ಆ ನೌಕರರಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ಆಯಾಯಾ ಪ್ರಾಥಮಿಕ ಸೇವಾ ಸಂಘಗಳೇ ಭರಿಸಬೇಕಾಗಿರುವುದರಿಂದ ಅವುಗಳ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಮುಚ್ಚಲ್ಪಟ್ಟ ಕೈಗಾರಿಕೆಗಳಿಂದಾಗಿರುವ ನಿರುದ್ಯೋಗಿಗಳು

೧೯೩. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ ?

೨. ಮುಚ್ಚಲ್ಪಟ್ಟ ಕೈಗಾರಿಕೆಗಳಿಂದ ಎಷ್ಟು ಮಂದಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ ?

೩. ಮುಚ್ಚಲ್ಪಟ್ಟ ಎಷ್ಟು ಕಾರ್ಖಾನೆಗಳು ಕಾರ್ಮಿಕ ಇಲಾಖೆಯು ಸಂಧಾನದ ಮಾತುಕತೆಯಿಂದ ಪುನರಾರಂಭಗೊಂಡಿದೆ ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

೧. ೧೯೮೫-೨

೧೯೮೬-೨

೧೯೮೭-೭

೨. ೧೯೮೫-೫೨೭

೧೯೮೬-೪೭

೧೯೮೭-೨೧೨೮

೩. ಯಾವುದೂ ಇಲ್ಲ.

ಶ್ರೀ ಜಿ. ಎಸ್. ಬಾಗಲಕೋಟಿ.—(ಮಾನ್ಯ ಆರ್ಥಿಕ ರಾಜ್ಯ ಸಚಿವರು ಕಾರ್ಮಿಕ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಇದರಲ್ಲಿ ಇನ್ನೊಂದು ವಿಷಯವೆಂದರೆ ಮಾನ್ಯ ಸದಸ್ಯರ (೩) ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಡಲಾಗಿತ್ತು. ಆದರೆ ಈಗ ಎರಡು ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಆ ಕಾರ್ಖಾನೆಗಳೆಂದರೆ ಕಂಟ್ರೋಲ್ ಸಿಸ್ಟಂ ಬೆಂಗಳೂರು, ಎರಡನೆಯದು ಟಿ. ಟಿ. ಪಿ. (ಥರ್ಮಲ್ ಟ್ರಾನ್ಸ್‌ಪೋರ್ಟ್ ಪ್ರಾಡಕ್ಟ್ಸ್ ಬೆಂಗಳೂರು).

ಶ್ರೀ ವೇದಾಂತ ಹೆಬ್ಬಿಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ೧೯೮೫ನೇ ಇಸವಿಯಲ್ಲಿ ಎರಡು ಕಾರ್ಖಾನೆಗಳು, ೧೯೮೬ನೇ ಇಸವಿಯಲ್ಲಿ ಎರಡೂಕಾರ್ಖಾನೆಗಳು, ೧೯೮೭ನೇ ಇಸವಿಯಲ್ಲಿ ಏಳು ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಎಂದಿದೆ ಇದಕ್ಕೆ ಪ್ರಮುಖ ಕಾರಣಗಳು ಯಾವುವು ? ಈ ಏಳು ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದಕ್ಕೆ ಕಾರ್ಮಿಕರ ಮುಷ್ಕರ ಕಾರಣವೋ ಅಥವಾ ಮಾಲೀಕರು ಕಾರಣವೋ ದಯವಾಡಿ ತಿಳಿಸಿ.

ಶ್ರೀ ಜಿ. ಎಸ್. ಬಾಗಲಕೋಟಿ.—ಈ ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದಕ್ಕೆ ಹಣಕಾಸಿನ ಕೊಂದರೆ ಮತ್ತು ವಿದ್ಯುಚ್ಛಕ್ತಿ ಕೊರತೆ ಸ್ವಲ್ಪ ಮಟ್ಟಿಗೆ ಕಾರಣವಿದೆ.

ಶ್ರೀ ವೇದಾಂತ ಹೆಬ್ಬಿಗೆ.—ಸ್ವಾಮಿ ನನ್ನ ಎರಡನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರವಾಗಿ ಏನು ಕೊಟ್ಟಿದ್ದಾರೆಂದರೆ ೧೯೮೫ನೇ ಇಸವಿಯಲ್ಲಿ ೫೨೭ ಜನ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ, ೧೯೮೬ನೇ ಇಸವಿಯಲ್ಲಿ ೪೭ ಜನ ನಿರುದ್ಯೋಗಿಗಳಾಗಿದ್ದಾರೆ ಎಂದು, ಇದು ಬಹಳ ವಿಷಾದನೀಯವಾದ ಸಂಗತಿ ೪೭ ಜನ ಮಾತ್ರ ನಿರುದ್ಯೋಗಿಗಳಾಗಿದ್ದಾರೆಂದು ಕಾರ್ಮಿಕ ಇಲಾಖೆಯವರು ಉತ್ತರ ಕೊಟ್ಟರೆ ಇದು ಸರಿಯೇ ? I have to say that the Labour Department has given a very wrong information here. ಎಷ್ಟೋ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ೧೯೮೬ನೇ ಇಸವಿಯಲ್ಲಿ ಮೈಸೂರು ಸಿಟಿಯಲ್ಲಿ As a Trade Union Leader, I know how many factories have been closed in Mysore City. ಅಮೇಲೆ ೧೯೮೭ನೇ ಇಸವಿಯಲ್ಲಿ ೨೧೨೮ ಜನ ನಿರುದ್ಯೋಗಿಗಳಾಗಿದ್ದಾರೆ. ಆದರೆ ಬರೀ ೪೭ ಜನ ಮಾತ್ರ ನಿರುದ್ಯೋಗಿಗಳಾಗಿದ್ದಾರೆಂದು ಕಾರ್ಮಿಕ ಇಲಾಖೆಯವರು ಯಾವ ಆಧಾರದ ಮೇಲೆ ಹೇಳಿದ್ದಾರೆ ?

ಶ್ರೀ ಜಿ. ಎಸ್. ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ ಫ್ಯಾಕ್ಟರಿಗಳು ಏನಿವೆ ಅಲ್ಲಿ ನೂರು ಜನರಿಗಿಂತ ಕಡಿಮೆ ಇರುವ ಕಾರ್ಖಾನೆಗಳ ಬಗ್ಗೆ ನಮ್ಮ ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಮಾಹಿತಿ ದೊರೆಯುವುದಿಲ್ಲ. ಮತ್ತು ನಾನು ಏನೊಂದು ಮಾಹಿತಿಯನ್ನು ಈಗ ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ ಅದು ನಿಜವಾದಂಥ ಮಾಹಿತಿ.

ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ ನಾನು ನನ್ನ ಪ್ರಶ್ನೆಯಲ್ಲಿ ಮುಚ್ಚಿರುವ ಕಾರ್ಖಾನೆಗಳು ಯಾವುವು ? ಅದರಲ್ಲಿ ಎಷ್ಟು ಕಾರ್ಖಾನೆಗಳು ಕೆಲಸ ಪುನರಾರಂಭ ಮಾಡಿವೆ ಎಂದು ಕೇಳಿದ್ದರೆ ಯಾವುದು ಇಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಆದರೆ ಈಗ ಇಲ್ಲಿ ಎರಡು ಕಾರ್ಖಾನೆಗಳು ಪುನರಾರಂಭಗೊಂಡಿವೆ ಎಂದು ಹೇಳಿದ್ದೀರಿ. ಈ ಸದನಕ್ಕೆ ಯಾವುದಾದರೊಂದು ಮಾಹಿತಿಯನ್ನು ಕೊಡಬೇಕಾದರೆ. ಜವಾಬ್ದಾರಿಯಿಂದ ಇಲಾಖೆಯವರು ಕೊಡಬೇಕು. ಏಕೆಂದರೆ ನಾವು ಸಹ ಜವಾಬ್ದಾರಿಯಿಂದ ಪ್ರಶ್ನೆ ಕೇಳಿರುತ್ತೇವೆ. ದಯವಿಟ್ಟು ನಾನು ಕಾರ್ಮಿಕ ಸಚಿವರನ್ನು ಕೇಳುತ್ತೇನೆ. ತಾವು ಕಾರ್ಮಿಕ ಇಲಾಖೆಗೆ ಚಾಟಿ ಏಟು ಕೊಟ್ಟು ಸರಿಯಾದ ಉತ್ತರ ಕೊಡಬೇಕು, ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ತಿಳುವಳಿಕೆ ಕೊಡುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟಿ.—ಸನ್ಮಾನ್ಯ ಹಿರಿಯ ಸದಸ್ಯರ ಸಲಹೆ ಸೂಚನೆಯನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ.

ರಾಜ್ಯದಲ್ಲಿರುವ ನಿರುದ್ಯೋಗಿಗಳು

೧೩೨ ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—(ಗುಂಡ್ಲುಪೇಟೆ) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೊಂದಾಯಿಸಿರುವ ಮಹಿಳಾ ಮತ್ತು ಪುರುಷ ನಿರುದ್ಯೋಗಿಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು) ಹಾಗೂ ಕಳೆದ ಮೂರು ವರ್ಷಗಳಿಂದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ ?

ಆ) ಸದರಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ರಾಜ್ಯ ಸರ್ಕಾರದವರು ನೇಮಕಾತಿಗಾಗಿ ಪಡೆದಿರುವ ಪಟ್ಟಿಯನ್ನು ತರಿಸದೆ ಕೇವಲ ನೇಮಕಾತಿ ಸಮಿತಿ ಮಂಕ್ತು ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುತ್ತಿರುವುದರಿಂದ ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದು ಗೊಳಿಸುವುದು ಸೂಕ್ತವಲ್ಲವೆ ?

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಸರ್ಕಾರದವರು ನೀಡುವ ಕಾರಣಗಳೇನು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ೧೯೮೭ನೇ ನವೆಂಬರ್ ಮಾಸಾಂತ್ಯದಲ್ಲಿ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು ೧೦,೧೭,೪೨೪ ಆಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುತ್ತಾರೆ. ಇವರುಗಳಲ್ಲಿ ೧,೯೨,೬೭೯ ಮಹಿಳೆಯರು ಮತ್ತು ೮,೨೪,೭೬೫ ಪುರುಷರು. ಜಿಲ್ಲಾವಾರು ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ ಅನುಬಂಧ-ಅ ನಲ್ಲಿ ಮಂಡಿಸಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಂದರೆ ೧೯೮೭ನೇ ನವೆಂಬರ್ ಅಂತ್ಯದವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ೪,೫೮೬ ಮಹಿಳೆಯರು ಮತ್ತು ೨೮೫೫೮ ಪುರುಷರು ಸೇರಿದಂತೆ ಒಟ್ಟು ೩೩,೧೧೪ ಉದ್ಯೋಗಾರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ. ವರ್ಷವಾರು ಉದ್ಯೋಗ ಪಡೆದವರ ವಿವರ ಅನುಬಂಧ-ಆ ನಲ್ಲಿ ಮಂಡಿಸಿದೆ.

ಆ) ರಾಜ್ಯ ಸರ್ಕಾರದಲ್ಲಿನ ಎಲ್ಲಾ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳಿಗೆ ರಾಜ್ಯದ ಲೋಕ ಸೇವಾ ಆಯೋಗ ಮತ್ತು ಇತರೆ ನೇಮಕಾತಿ ಸಮಿತಿಗಳ ಮೂಲಕ ನೇಮಕಾತಿ ಮಾಡಲಾಗುತ್ತಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿನ ಎಲ್ಲಾ ಇಲಾಖೆಗಳಲ್ಲಿನ ಗ್ರೂಪ್ 'ಡಿ' ಹುದ್ದೆಗಳು ಹಾಗೂ ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿಯು ಗರಿಷ್ಠ ವೇತನ ಶ್ರೇಣಿ ರೂ. ೧೫೫೦ ಒಳಪಡುವ ಹುದ್ದೆಗಳು ಉದ್ಯೋಗ ವಿನಿಮಯ ಕೇಂದ್ರಗಳ ವ್ಯಾಪ್ತಿಗೆ ಒಳಪಟ್ಟಿದೆ. ಅಲ್ಲದೆ ದಿನಾಂಕ ೩-೮-೮೭ರಂದು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಉದ್ದಿಮೆಗಳು ಹಾಗೂ ಖಾಸಗಿ ಉದ್ದಿಮೆಗಳ ಅಧಿಕಾರ ವ್ಯಾಪ್ತಿಯಲ್ಲಿ ಉದ್ಭವವಾಗುವಂತಹ ಮಾಸಿಕ ವೇತನ ರೂ. ೧೫೫೦ಗಳ (ಒಂದು ಸಾವಿರದ ಇನ್ನೂರೈವತ್ತು ಮಾತ್ರ) ಕೆಳಗೆ ಬರುವಂತಹ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯ರ ಬೇರೆಗೆ